ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧ **Volume - 161**	ಬೆಂಗಳೂರು, ಶುಕ್ರವಾರ, ೦೬, ಮಾರ್ಚ್, ೨೦೨೬ (ಫಾಲ್ಗುಣ, ೧೫, ಶಕವರ್ಷ, ೧೯೪೭) **BENGALURU, FRIDAY, 06, MARCH, 2026 (PHALGUNA , 15, SHAKAVARSHA, 1947)**	ಸಂಚಿಕೆ ೪೬ **Issue 46**

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2022ರ ಅಧಿನಿಯಮದನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೆಚ್ಚಿಸಲಾದ ಮೀಸಲಾತಿ ಪ್ರಮಾಣವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995, ದಿನಾಂಕ 20.06.1995
2. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2022, ದಿನಾಂಕ: 28.12.2022
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2023, ದಿನಾಂಕ: 8.3.2023
5. ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024 (ಭಾ-1), ದಿನಾಂಕ: 25-08-2025
6. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 2 ಸೇಹಿಮ 2025, ದಿನಾಂಕ: 03-09-2025
7. ಮಾನ್ಯ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 200448 /2025, 17968/2025 ಮತ್ತು 3145/2023ರಲ್ಲಿ ದಿನಾಂಕ 27.11.2025ರಂದು ನೀಡಿರುವ ಮಧ್ಯಂತರ ಆದೇಶ.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ 20.06.1995ರ ಸರ್ಕಾರದ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕ್ರಮವಾಗಿ ನಿಗಧಿಪಡಿಸಲಾಗಿದ್ದ ಶೇ15 ಮತ್ತು ಶೇ 3 ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಭರ್ತಿ ಮಾಡಬೇಕಾದ ರಿಕ್ತ ಸ್ಥಾನಗಳಿಗೆ 100 ಬಿಂದುಗಳ ರೋಸ್ಟರನ್ನು ನಿಗಧಿಪಡಿಸಲಾಗಿರುತ್ತದೆ.

2. ಮೇಲೆ (2) ರಲ್ಲಿ ಓದಲಾದ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ರಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ರಾಜ್ಯದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಶೇ. 17 ಮತ್ತು ಶೇ.7 ರಂತೆ ಮೀಸಲಾತಿ ಪ್ರಮಾಣವನ್ನು ಅನುಕ್ರಮವಾಗಿ ಹೆಚ್ಚಿಸಲಾಗಿರುತ್ತದೆ.

3. ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 2022ರ ಅಧಿನಿಯಮದನ್ವಯ ಹೆಚ್ಚಿನ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ರಿಕ್ತ ಸ್ಥಾನಗಳಿಗೆ ಸಂಬಂಧಿಸಿದಂತೆ 100 ಬಿಂದುಗಳ ಪರಿಷ್ಕೃತ ರೋಸ್ಟರನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

4. ಮೇಲೆ (4) ರಲ್ಲಿ ಓದಲಾದ ದಿನಾಂಕ 08.03.2023ರ ಸರ್ಕಾರದ ಆದೇಶದಲ್ಲಿ ಪ್ರತಿಯೊಂದು ನೇರ ಮೀಸಲಾತಿ ಪ್ರವರ್ಗದಡಿ (under each category of vertical reservation) ಮಾಜಿ ಸೈನಿಕ, ಅಂಗವಿಕಲ, ಮಹಿಳೆ, ಯೋಜನೆಗಳಿಂದ ನಿರ್ವಸಿತರಾದವರು, ಗ್ರಾಮೀಣ ಅಭ್ಯರ್ಥಿ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ ಮತ್ತು ತೃತೀಯ ಲಿಂಗಿಗಳಿಗೆ ಕಲ್ಪಿಸಲಾದ ಸಮತಳ ಮೀಸಲಾತಿಯನ್ನು ಜಾರಿಗೊಳಿಸಲು 100 ಬಿಂದುಗಳ ರೋಸ್ಟರನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

5. ಮೇಲೆ (5) ರಲ್ಲಿ ಓದಲಾದ ದಿನಾಂಕ 25.08.2025ರ ಸರ್ಕಾರದ ಆದೇಶದಲ್ಲಿ ಪರಿಶಿಷ್ಟ ಜಾತಿಗಳಲ್ಲಿರುವ 101 ಜಾತಿಗಳನ್ನು ಪ್ರವರ್ಗ-ಎ, ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಗಳೆಂದು 3 ಪ್ರವರ್ಗಗಳಾಗಿ ವರ್ಗೀಕರಿಸಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಶೇಕಡ 17 ಮೀಸಲಾತಿಯನ್ನು, ಪ್ರವರ್ಗ-ಎ ರಲ್ಲಿನ ಸಮುದಾಯಗಳಿಗೆ ಶೇಕಡ 6, ಪ್ರವರ್ಗ-ಬಿ ರಲ್ಲಿನ ಸಮುದಾಯಗಳಿಗೆ ಶೇಕಡ 6 ಮತ್ತು ಪ್ರವರ್ಗ-ಸಿ ರಲ್ಲಿನ ಸಮುದಾಯಗಳಿಗೆ ಶೇಕಡ 5 ರಷ್ಟು ಮೀಸಲಾತಿಯನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

6. ಮೇಲೆ (6) ರಲ್ಲಿ ಓದಲಾದ ದಿನಾಂಕ 03.09.2025ರ ಸರ್ಕಾರದ ಆದೇಶದಲ್ಲಿ ದಿನಾಂಕ 28.12.2022ರ ಆದೇಶದಲ್ಲಿ ನಿಗದಿಪಡಿಸಲಾಗಿದ್ದ 100 ಬಿಂದುಗಳ ಮೀಸಲಾತಿ ರೋಸ್ಟರಿನಲ್ಲಿ

ಪರಿಶಿಷ್ಟ ಜಾತಿಗಳಿಗೆ ಗುರುತಿಸಲಾಗಿರುವ 17 ಬಿಂದುಗಳನ್ನು ಮಾತ್ರ ಸದರಿ ಆದೇಶದದಲ್ಲಿರುವ ಅನುಬಂಧದಂತೆ ಪುನರ್ ವರ್ಗೀಕರಿಸಿ ಆದೇಶಿಸಲಾಗಿರುತ್ತದೆ.

7. ಮೇಲೆ (7)ರಲ್ಲಿ ಓದಲಾದ ಪ್ರಕರಣಗಳಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ರನ್ವಯ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ.15 ರಿಂದ ಶೇ.17ಕ್ಕೆ ಹಾಗೂ ಶೇ.3 ರಿಂದ ಶೇ.7ಕ್ಕೆ ಹೆಚ್ಚಿಸಲಾಗಿರುವುದನ್ನು ಪ್ರಶ್ನಿಸಲಾಗಿದ್ದು, ಸದರಿ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು **ದಿನಾಂಕ: 27.11.2025ರಂದು ಕೆಳಗಿನಂತೆ** ಮಧ್ಯಂತರ ಆದೇಶ ನೀಡಿರುತ್ತದೆ.

> 6. Considering that recruitment process has already begun pursuant to certain notifications specifying the enhanced reservation under the Karnataka Scheduled Castes and Scheduled Tribes (Reservation of Seats in Education Institutions and Appointments of Posts and Services under the State) Act, 2022 (hereafter Act), **we consider it apposite to modify our order dated 19.11.2025 to direct that no further notifications for recruitment or appointment on the basis of increased reservation would be issued till the disposal of the present petitions. The recruitment pursuant to the process that is already begun, may be continued. However, any appointment made shall be subject to the final outcome of the present petitions.**

8. ಮಾನ್ಯ ಉಚ್ಚ ನ್ಯಾಯಾಲಯವು ಮೇಲಿನಂತೆ ನೀಡಿರುವ ಮಧ್ಯಂತರ ಆದೇಶದಿಂದಾಗಿ ಹಲವಾರು ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿದ್ದು, ನಿರುದ್ಯೋಗಿ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಹಾಗೂ ಆಡಳಿತಾತ್ಮಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿರುವುದರಿಂದ ನೇಮಕಾತಿ ಪ್ರಕ್ರಿಯೆಯನ್ನು ತುರ್ತಾಗಿ ಮುಂದುವರೆಸಬೇಕಾಗಿರುವುದರಿಂದ ನೇಮಕಾತಿ ಅಧಿಸೂಚನೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ಸಿಅಸುಇ 1 ಸೇಹಿಮ 2022, ದಿನಾಂಕ: 28-12-2022ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ (ಮೀಸಲಾತಿ ಪ್ರಮಾಣ ಶೇ.50ಕ್ಕೆ) ಹೊರಡಿಸುವುದು ಸೂಕ್ತವೆಂದು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮ 2026,

ಬೆಂಗಳೂರು, ದಿನಾಂಕ: 27.02.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶದಲ್ಲಿ, ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

1. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ನ್ನು ಪುಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟು ಹಾಗೂ ಸರ್ಕಾರದ ಮುಂದಿನ ಆದೇಶದವರೆಗೆ, ದಿನಾಂಕ 27.11.2025ರ ನಂತರದಲ್ಲಿ ರಾಜ್ಯ ಸಿವಿಲ್ ಸೇವಾ ಹುದ್ದಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಅಸುಇ 1 ಸೇಹಿಮ 2022, ದಿನಾಂಕ: 28-12-2022ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ (ಸರ್ಕಾರದ ಆದೇಶ ಸಂಖ್ಯೆ: ಸಿಅಸುಇ 8 ಸೇಹಿಮ 1995, ದಿನಾಂಕ 20.06.1995ರನ್ವಯ ಮೀಸಲಾತಿ ಪ್ರಮಾಣವನ್ನು ಶೇ.50ಕ್ಕೆ) ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸುವಂತೆ ಎಲ್ಲಾ ನೇಮಕಾತಿ/ಆಯ್ಕೆ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

2. ಈ ರೀತಿಯ ಆಯ್ಕೆಯನ್ನು ಹಿಂದಿನ ನೇಮಕಾತಿಯಲ್ಲಿ ಅಂದರೆ ದಿನಾಂಕ 28.12.2022ರ ಆದೇಶದಲ್ಲಿ ಗೊತ್ತುಪಡಿಸಿರುವ ರೋಸ್ಟರಿನ ಯಾವ ಬಿಂದುವಿನಲ್ಲಿ ನಿಲ್ಲಿಸಲಾಗಿತ್ತೋ ಆ ಬಿಂದುವಿನ ಮುಂದಿನ ರೋಸ್ಟರ್ ಬಿಂದುವಿಗೆ ಸರಿಸಮವಾದ ಬಿಂದುವನ್ನು ದಿನಾಂಕ 20.06.1995ರ ಸರ್ಕಾರದ ಆದೇಶ ಸಂಖ್ಯೆ: ಸಿಅಸುಇ 8 ಸೇಹಿಮ 1995ರಲ್ಲಿ ಗುರುತಿಸಿ ಅಲ್ಲಿಂದ ಪ್ರಾರಂಭಿಸಿ ಆಯ್ಕೆ ಮಾಡತಕ್ಕದ್ದು (ಉದಾಹರಣೆಗೆ ಹಿಂದಿನ ನೇಮಕಾತಿಯಲ್ಲಿ ದಿನಾಂಕ 28.12.2022ರ ಆದೇಶದಲ್ಲಿ ಗೊತ್ತುಪಡಿಸಿರುವ ರೋಸ್ಟರಿನ ಅನುಸಾ0ರ 10 ನೇ ಬಿಂದುವಿನವರೆಗೆ ಪೂರ್ಣಗೊಳಿಸಲಾಗಿದ್ದಲ್ಲಿ, ಈಗ ಮಾಡಬೇಕಾಗಿರುವ ಅಯ್ಕೆಯನ್ನು ದಿನಾಂಕ 20.06.1995ರ ಆದೇಶದಲ್ಲಿನ ಅನುಬಂಧ-1ರ ರೋಸ್ಟರಿನ 11 ನೇ ಬಿಂದುವಿನಿಂದ ಪ್ರಾರಂಭಿಸಿ ಪೂರ್ಣಗೊಳಿಸತಕ್ಕದ್ದು).

3. ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ 27.11.2025ರ ಮಧ್ಯಂತರ ಆದೇಶಕ್ಕಿಂತ ಹಿಂದೆ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿರುವ ಪ್ರಕರಣಗಳನ್ನು ಯಥಾಪ್ರಕಾರ ಮುಂದುವರೆಸಿ, ಅಂತಿಮಗೊಳಿಸುವುದು ಹಾಗೂ ನೇಮಕಾತಿ ಆದೇಶದಲ್ಲಿ ಸ್ಪಷ್ಟವಾಗಿ ಈ ನೇಮಕಾತಿಯು ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶಕ್ಕೊಳಪಟ್ಟಿರುತ್ತದೆಂದು ಷರಾ ದಾಖಲಿಸತಕ್ಕದ್ದು.

4. ಸಮತಳ ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2023, ದಿನಾಂಕ: 8.3.2023ರಲ್ಲಿ ನಿಗಧಿಪಡಿಸಲಾಗಿರುವ ರೋಸ್ಟರ್ ಬಿಂದುಗಳನ್ನೇ ಮುಂದುವರೆಸುವುದು. ಹಿಂದಿನ ನೇಮಕಾತಿಯಲ್ಲಿ ದಿನಾಂಕ 08.03.2023 ಆದೇಶದಲ್ಲಿ ಗೊತ್ತುಪಡಿಸಿರುವ ರೋಸ್ಟರಿನ ಯಾವ ಬಿಂದುವಿನಲ್ಲಿ ನಿಲ್ಲಿಸಲಾಗಿತ್ತೋ ಆ ಬಿಂದುವಿನ ಮುಂದಿನ ರೋಸ್ಟರ್ ಬಿಂದುವಿನಿಂದ ಪ್ರಾರಂಭಿಸಿ ಆಯ್ಕೆ ಮಾಡತಕ್ಕದ್ದು.

5. ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟುಆಯಾ ಇಲಾಖೆಗಳು / ನೇಮಕಾತಿ ಪ್ರಾಧಿಕಾರಗಳು ಮುಂದಿನ ನೇಮಕಾತಿ ಮಾಡಿಕೊಳ್ಳುವ ಹುದ್ದೆಗಳಲ್ಲಿ ಶೇ 6

ರಷ್ಟು (ಪರಿಶಿಷ್ಟ ಜಾತಿಗೆ ಶೇ.2 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ.4) ಹುದ್ದೆಗಳನ್ನು ಕಾಯ್ದಿರಿಸತಕ್ಕದ್ದು.

6. ಮುಂದುವರೆದು, ಖಾಲಿಯಿರುವ ನೇರ ನೇಮಕಾತಿ ಹುದ್ದೆಗಳಲ್ಲಿ ಸುಮಾರು 56432 ಹುದ್ದೆಗಳನ್ನು ತುಂಬುವ ಪ್ರಕ್ರಿಯೆಯನ್ನು ಮುಂದಿನ 30 ದಿನಗಳಲ್ಲಿ ಪ್ರಾರಂಭಿಸುವಂತೆ ಎಲ್ಲಾ ಇಲಾಖೆಗಳಿಗೆ / ನೇಮಕಾತಿ ಪ್ರಾಧಿಕಾರಗಳಿಗೆ ತಿಳಿಸಿದೆ.

ಮೇಲಿನ ಸೂಚನೆಗಳು ಸರ್ಕಾರದ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಆಶಾ ಕುಮಾರಿ ಎ. ಜೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು).

PR-63

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :-	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಈ ಸಂಘಕ್ಕೆ ನೇಮಿಸಿರುವ ಆಡಳಿತಾಧಿಕಾರಿಯ ಬದಲಾವಣೆಯ ಬಗ್ಗೆ.
ಓದಲಾಗಿದೆ :-	1. ಸರ್ಕಾರದ ಆದೇಶ ಸಂಖ್ಯೆ: ಸಿಒ 281 ಸಿಎಸ್‌ಆರ್ 2025 ಬೆಂಗಳೂರು, ದಿನಾಂಕ:30.09.2025 ಮತ್ತು ದಿನಾಂಕ:30.12.2025. 2. ಅಧಿಸೂಚನೆ ಸಂಖ್ಯೆ:e-DPAR 49 SAS 2026, ದಿನಾಂಕ:20.02.2026. 3. ಶ್ರೀಮತಿ ಕೆ.ಎಂ.ಗಾಯತ್ರಿ., ಆಡಳಿತಾಧಿಕಾರಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರ ಪತ್ರ ಸಂಖ್ಯೆ:ಕಸಾಪ/ವ್ಯ.ವಿ/2025-26, ದಿನಾಂಕ:23.02.2026.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕನ್ನಡ ಸಾಹಿತ್ಯ ಪರಿಷತ್ತು(ನೋಂದಣಿ ಸಂಖ್ಯೆ:328/1915-16), ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ಸಂಘಕ್ಕೆ ಶ್ರೀಮತಿ. ಕೆ.ಎಂ. ಗಾಯಿತ್ರಿ, ಭಾ.ಆ.ಸೇ., ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 03 ತಿಂಗಳ ಅವಧಿಗೆ ಅಥವಾ ಕಲಂ.25ರ ವಿಚಾರಣೆ ಪೂರ್ಣಗೊಳ್ಳುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿದ್ದು, ದಿನಾಂಕ:30.12.2025ರ ಆದೇಶದಲ್ಲಿ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:29.12.2025 ರಿಂದ ಮುಂದಿನ 03 ತಿಂಗಳ ಅವಧಿಗೆ ಅಥವಾ ಕಾಯ್ದೆಯ ಕಲಂ.25ರ ವಿಚಾರಣೆ ಪೂರ್ಣಗೊಂಡು, ವಿಚಾರಣಾ ವರದಿಯನ್ನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿ, ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಆದೇಶದಂತೆ ಹಾಗೂ ನಂತರ ಸದರಿ ವಿಚಾರಣಾ ವರದಿಯನ್ನಾಧರಿಸಿ ಸಕ್ಷಮ ಪ್ರಾಧಿಕಾರಿಯಾಗಿರುವ ಜಿಲ್ಲಾ ನೋಂದಣಾಧಿಕಾರಿಗಳು, 2ನೇ

ವಲಯ, ಬೆಂಗಳೂರು ನಗರ ಜಿಲ್ಲೆ ಇವರು ಸಲ್ಲಿಸುವ ವರದಿಯಂತೆ ಸರ್ಕಾರದಿಂದ ಅಂತಿಮ ತೀರ್ಮಾನವಾಗುವವರೆಗೆ ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2) ರ ಅಧಿಸೂಚನೆಯಲ್ಲಿ ಶ್ರೀಮತಿ. ಕೆ.ಎಂ. ಗಾಯಿತ್ರಿ, ಭಾ.ಆ.ಸೇ., ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(3)ರ ಪತ್ರದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಸಿಒ 281 ಸಿಎಸ್‌ಆರ್ 2025, ದಿನಾಂಕ:30.09.2025 ಮತ್ತು ದಿನಾಂಕ:30.12.2025ರನ್ವಯ ಆಡಳಿತಾಧಿಕಾರಿಯಾಗಿ ದಿನಾಂಕ:28.10.2025 ರಿಂದ ಕರ್ತವ್ಯವನ್ನು ನಿರ್ವಹಿಸುತ್ತಿದ್ದು, ಸರ್ಕಾರವು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹುದ್ದೆಯಿಂದ ದಿನಾಂಕ:20.02.2026ರ ಆದೇಶದಲ್ಲಿ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಹುದ್ದೆಗೆ ವರ್ಗಾವಣೆ ಮಾಡಿ ಆದೇಶಿಸಿದ್ದು, ಅದರನ್ವಯ ದಿನಾಂಕ:21.02.2026 ರ ಅಪರಾಹ್ನ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹುದ್ದೆಯ ಕರ್ತವ್ಯದಿಂದ ಬಿಡುಗಡೆ ಹೊಂದಿ ದಿನಾಂಕ:23.02.2026ರ ಪೂರ್ವಾಹ್ನ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಹುದ್ದೆಯ ಕರ್ತವ್ಯವನ್ನು ವಹಿಸಿಕೊಂಡಿರುವುದಾಗಿ ದಾಖಲೆಗಳೊಂದಿಗೆ ಮಾಹಿತಿ ಸಲ್ಲಿಸಿರುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯಾಗಿದ್ದ ಶ್ರೀಮತಿ ಕೆ.ಎಂ.ಗಾಯತ್ರಿ ಇವರು ವರ್ಗಾವಣೆ ಹೊಂದಿದ್ದರಿಂದ ಸದರಿ ಆಡಳಿತಾಧಿಕಾರಿ ಹುದ್ದೆಗೆ ಶ್ರೀ ಕೆ.ಎ.ದಯಾನಂದ, ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 281 ಸಿಎಸ್‌ಆರ್ 2025
ಬೆಂಗಳೂರು, ದಿನಾಂಕ: 02ನೇ ಮಾರ್ಚ್ 2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಸಿಒ 281 ಸಿಎಸ್‌ಆರ್ 2025, ದಿನಾಂಕ:30.09.2025ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕನ್ನಡ ಸಾಹಿತ್ಯ ಪರಿಷತ್ತು(ನೋಂದಣಿ ಸಂಖ್ಯೆ:328/1915-16), ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ಸಂಘಕ್ಕೆ ಆಡಳಿತಾಧಿಕಾರಿಯಾಗಿ ನೇಮಿಸಲಾಗಿದ್ದ ಶ್ರೀಮತಿ ಕೆ.ಎಂ. ಗಾಯತ್ರಿ ಭಾ.ಆ.ಸೇ., ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಬದಲಿಸಿ ಶ್ರೀ ಕೆ.ಎ. ದಯಾನಂದ ಭಾ.ಆ.ಸೇ., ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರನ್ನು ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಅಧಿಕಾರ ವಹಿಸಿಕೊಂಡು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 25ರ ವಿಚಾರಣಾ ವರದಿಯನ್ನಾಧರಿಸಿ ನಿಯಮಾನುಸಾರ ಕ್ರಮವಿಟ್ಟು ಸಕ್ಷಮ ಪ್ರಾಧಿಕಾರಿ ಮತ್ತು ಸರ್ಕಾರಕ್ಕೆ ವರದಿ ನೀಡಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-64

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೋಲಾರ ಜಿಲ್ಲೆಯ ಮಾಲೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:

1. ಕಡತ ಸಂಖ್ಯೆ: ಲಾ-ಎಲ್‌ಸಿಎಲ್/340/2025.
2. ಸರ್ಕಾರದ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/340/2025, ದಿನಾಂಕ : 03-01-2026.
3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಜಿಲ್ಲೆ ರವರ ಕಛೇರಿ ಪತ್ರ ಸಂಖ್ಯೆ: 834/2026, ದಿನಾಂಕ : 20-02-2026.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಕಡತದಲ್ಲಿ ಕೋಲಾರ ಜಿಲ್ಲೆಯ ಮಾಲೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು ನೋಟರಿ ಹುದ್ದೆಯನ್ನು ಸೃಜಿಸಲು ಪ್ರಸ್ತಾಪಿಸಿಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಕೋಲಾರ ಜಿಲ್ಲೆಯ ಮಾಲೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವ ಬಗ್ಗೆ ಪರಿಶೀಲಿಸಲು ಕೆಲವು ಅಂಶಗಳಿಗೆ ಮಾಹಿತಿ / ಅಭಿಪ್ರಾಯವನ್ನು ತಿಳಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಜಿಲ್ಲೆ ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ದಿನಾಂಕ : 20-02-2026ರ ಪತ್ರದಲ್ಲಿ ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು, ಕರ್ನಾಟಕದ ಗಡಿ ಪ್ರದೇಶವಾಗಿದ್ದು, ತಮಿಳನಾಡಿನ ಹೊಸೂರು ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗಡಿ ಭಾಗಗಳಿಗೆ ಹೊಂದಿಕೊಂಡಿದ್ದು, ಸದರಿ ತಾಲ್ಲೂಕಿನಲ್ಲಿ ಕೈಗಾರಿಕೆಗಳು ಹೆಚ್ಚಿದ್ದು, ವಾಣಿಜ್ಯ ಚಟುವಟಿಕೆಗಳು ಸಹಾ ಹೆಚ್ಚಾಗಿ ನಡೆಯುತ್ತಿರುತ್ತದೆ. ಅಲ್ಲದೇ, ಸದರಿ ತಾಲ್ಲೂಕಿನಲ್ಲಿ ಒಂದು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೂರು ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಜನಸಂಖ್ಯೆ ಹೆಚ್ಚಳದಿಂದ ಹಾಗೂ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿರುವ ಕಾರಣ, ನ್ಯಾಯಿಕ ಚಟುವಟಿಕೆಗಳ, ಆರ್ಥಿಕ ಹಾಗೂ ಕಾನೂನು ಸಂಬಂಧಿತ ವಿಷಯಗಳ ಬಗ್ಗೆ ನೋಟರಿ ಸೇವೆಗಳಿಗೆ ಬೇಡಿಕೆ ಇರುತ್ತದೆಂದು, ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಿದಲ್ಲಿ ತಾಲ್ಲೂಕಿನ ಹೆಚ್ಚಿನ ಜನರನ್ನು ತಲುಪಲು ಸಾಧ್ಯವಾಗುತ್ತದೆಂದು ಅಭಿಪ್ರಾಯ ತಿಳಿಸಿ, ಕೋಲಾರ ಜಿಲ್ಲೆಯ ಮಾಲೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಬಹುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಜಿಲ್ಲೆ ಇವರು ಅಭಿಪ್ರಾಯ ತಿಳಿಸಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಜಿಲ್ಲೆ ಇವರ ಅಭಿಪ್ರಾಯದನ್ವಯ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ನೋಟರಿಗಳ ನಿಯಮಗಳು, 1956ರ ನಿಯಮ 8(4A) ರನ್ವಯ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ - ಎಲ್‌ಸಿಎಲ್/340/2025,
ಬೆಂಗಳೂರು, ದಿನಾಂಕ : 02-03-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೋಲಾರ ಜಿಲ್ಲೆಯ ಮಾಲೂರು ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-65

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಲಸಂಪನ್ಮೂಲ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ಹುದ್ದೆಗಳ ನೇರ ನೇಮಕಾತಿಯಲ್ಲಿ ಸಿವಿಲ್ ಮತ್ತು ಮೆಕ್ಯಾನಿಕಲ್ ವೃಂದದವರಿಗೆ ಅನುಪಾತ ನಿಗಧಿಪಡಿಸುವ ಕುರಿತು – ಕಾರ್ಯಕಾರಿ ಆದೇಶ.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 293 ಸೇಸಕಿ 2005, ದಿನಾಂಕ:03.12.2014
2. ಸರ್ಕಾರದ ಆದೇಶ ಸಂಖ್ಯೆ: ಜಸಂಇ 104 ಸೇಸಕಿ 2016, ದಿನಾಂಕ:28.11.2017 2019, ದಿನಾಂಕ:20.03.2023
3. ಸರ್ಕಾರದ ಆದೇಶ ಸಂಖ್ಯೆ: ಜಸಂಇ 208 ಸೇಎಸು 2019, ದಿನಾಂಕ:04.12.2019
4. ಸರ್ಕಾರದ ಆದೇಶ ಸಂಖ್ಯೆ:ಜಸಂಇ 2008 ಸೇಎಸು 2019, ದಿನಾಂಕ:20.02.2023

****

ಪ್ರಸ್ತಾವನೆ:

1. ಮೇಲೆ (1)ರಲ್ಲಿ ಓದಲಾದ ದಿನಾಂಕ: 03-12-2014 ರ ಸರ್ಕಾರದ ಅಧಿಸೂಚನೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರಕಟಿಸಲಾಗಿದೆ. ಇದು ದಿನಾಂಕ: 11-12-2014 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿದೆ.

2. ಮೇಲೆ (2) ರಲ್ಲಿ ಓದಲಾದ ದಿನಾಂಕ: 28-11-2017 ರ ಸರ್ಕಾರದ ಅಧಿಸೂಚನೆಯಲ್ಲಿ ಜಲಸಂಪನ್ಮೂಲ ಇಲಾಖೆಯಲ್ಲಿ 2009 ರ ನಂತರ ನೇಮಕಗೊಂಡ ಸಹಾಯಕ ಇಂಜಿನಿಯರ್ (ವಿಭಾಗ-1) (ಸಿವಿಲ್ ಹಾಗೂ ಮೆಕ್ಯಾನಿಕಲ್) ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯಿಂದ ಜಲ ಸಂಪನ್ಮೂಲ ಇಲಾಖೆಯು ಬೇರ್ಪಡೆಗೊಂಡ ನಂತರ ಆಯ್ಕೆ ಮೂಲಕ ಬರುವ ಸಹಾಯಕ ಇಂಜಿನಿಯರ್‌ಗಳಿಗೆ ಅಂತರ್ ಜೇಷ್ಠತೆ (Interse Seniority) ನಿಗಧಿ ಪಡಿಸುವ ಹಾಗೂ ಸಹಾಯಕ ಇಂಜಿನಿಯರ್ ವೃಂದದ ಜೇಷ್ಠತೆಗೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿ / ನ್ಯಾಯಾಲಯವು ನೀಡುವ ಅಂತಿಮ ತೀರ್ಪಿನ ಮೇರೆಗೆ ಪರಿಷ್ಕರಿಸುವ ಷರತ್ತಿಗೆ ಒಳಪಟ್ಟು ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಇದನ್ನು ದಿನಾಂಕ: 26-07-2018 ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿತ್ತು.

3. ಮೇಲೆ (3) ರಲ್ಲಿ ಓದಲಾದ ದಿನಾಂಕ: 04-12-2019 ರ ಸರ್ಕಾರದ ಆದೇಶದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ ಜಸಂಇ 204 ಸೇಸಕಿ 2016, ದಿನಾಂಕ: 28-11-2017 ರಲ್ಲಿ ಪ್ರಕಟವಾಗಿರುವ ಸಹಾಯಕ ಇಂಜಿನಿಯರ್ (ವಿಭಾಗ-1) (ಸಿವಿಲ್ ಹಾಗೂ ಮೆಕ್ಯಾನಿಕಲ್) ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಆಧರಿಸಿ ಸಹಾಯಕ ಇಂಜಿನಿಯರ್ (ಸಿವಿಲ್) ಹಾಗೂ ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್) ಇವರುಗಳ ಜೇಷ್ಠತೆಗೆ ಅನುಗುಣವಾಗಿ working list ಅನ್ನು ಸಿದ್ಧಪಡಿಸಿ, ಸಹಾಯಕ ಇಂಜಿನಿಯರ್ (ಸಿವಿಲ್) ಮತ್ತು ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್) ವೃಂದಗಳಿಗೆ 10:1 ರ ಅನುಪಾತದಲ್ಲಿ (10 : 1 Ratio) ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ಹುದ್ದೆಗೆ ಬಡ್ತಿ ನೀಡಲು ಕಾರ್ಯಕಾರಿ ಆದೇಶವನ್ನು ಹೊರಡಿಸಲಾಗಿದೆ.

4. ಕರ್ನಾಟಕ ಲೋಕಸೇವಾ ಆಯೋಗವು ಅಧಿಸೂಚನೆ ಸಂಖ್ಯೆ:ಪಿಎಸ್‌ಐ 16 ಆರ್‌ಟಿಬಿ 2007, ದಿನಾಂಕ:16-10-2008 ರಲ್ಲಿ 658 ಸಹಾಯಕ ಇಂಜಿನಿಯರ್ (ಸಿವಿಲ್) ಹಾಗೂ 72 ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್) ಹುದ್ದೆಗಳನ್ನು ನೇರ ನೇಮಕಾತಿಯಡಿ ಆಯ್ಕೆ ಪಟ್ಟಿ ಪ್ರಕಟಿಸಿದ್ದು, ಸದರಿ ನೇಮಕಾತಿಗಳಲ್ಲಿ ಸಹಾಯಕ ಇಂಜಿನಿಯರ್ ಸಿವಿಲ್ / ಮೆಕ್ಯಾನಿಕಲ್ ಹುದ್ದೆಗಳನ್ನು 9 : 1 ರ ಅನುಪಾತದಲ್ಲಿ ನೇಮಕ ಮಾಡಿರುತ್ತದೆ.

5. ಆದ್ದರಿಂದ, ಮೇಲೆ (3) ರಲ್ಲಿ ಓದಲಾದ ದಿನಾಂಕ:20.02.2023 ರ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ ಜಸಂಇ 208 ಸೇಎಸು 2019, ದಿನಾಂಕ 04-12-2019 ರಲ್ಲಿ ಜಲ ಸಂಪನ್ಮೂಲ ಇಲಾಖೆಯಲ್ಲಿ ನೇರ ನೇಮಕಾತಿ ಹೊಂದಿರುವ ಸಹಾಯಕ ಇಂಜಿನಿಯರ್ (ವಿಭಾಗ-1) (ಸಿವಿಲ್) ಮತ್ತು ಸಹಾಯಕ ಇಂಜಿನಿಯರ್ (ವಿಭಾಗ-1) (ಮೆಕ್ಯಾನಿಕಲ್) ಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ವೃಂದಕ್ಕೆ ಮುಂಬಡ್ತಿಗೆ ಪರಿಗಣಿಸಲು ನಿಗಧಿಪಡಿಸಲಾಗಿರುವ 10 : 1 ರ ಅನುಪಾತವನ್ನು ಮಾರ್ಪಡಿಸಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ವೃಂದಕ್ಕೆ ಮುಂಬಡ್ತಿಗೆ ಸಹಾಯಕ ಇಂಜಿನಿಯರ್ (ವಿಭಾಗ-1) (ಸಿವಿಲ್) ಮತ್ತು ಸಹಾಯಕ ಇಂಜಿನಿಯರ್ (ವಿಭಾಗ-1) (ಮೆಕ್ಯಾನಿಕಲ್) ಗಳಿಗೆ 9 : 1 ರ ಅನುಪಾತವನ್ನು ನಿಗಧಿಪಡಿಸಿ ಕಾರ್ಯಕಾರಿ ಆದೇಶವನ್ನು ಹೊರಡಿಸಲಾಗಿರುತ್ತದೆ.

6. ಅದೇ ರೀತಿ, ಜಲ ಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿ ಕೋಟಾದ ಅಡಿ ಮಂಜೂರಾದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) (ಸಿವಿಲ್) & (ಮೆಕ್ಯಾನಿಕಲ್) ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸಿವಿಲ್ ಮತ್ತು ಮೆಕ್ಯಾನಿಕಲ್ ಇಂಜಿನಿಯರ್‌ಗಳ ನೇರ ನೇಮಕಾತಿ ಅನುಸರಿಸಬೇಕಾದ ಅನುಪಾತದ ಬಗ್ಗೆ ಸ್ಪಷ್ಟತೆ ಇಲ್ಲದ ಕಾರಣ ಈಗಾಗಲೇ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) (ಸಿವಿಲ್ ಮತ್ತು ಮೆಕ್ಯಾನಿಕಲ್) ವೃಂದದಲ್ಲಿ ಮುಂಬಡ್ತಿ ಹುದ್ದೆಗಳಿಗೆ ನಿಗ'ಧಿಪಡಿಸಿರುವಂತೆ ನೇರ ನೇಮಕಾತಿ ಹುದ್ದೆಗಳಿಗೂ ಸಹ 9:1 ರ ಅನುಪಾತವನ್ನು ನಿಗಧಿಪಡಿಸಿ ಕಾರ್ಯಕಾರಿ ಆದೇಶವನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿದೆ.

7. ಅದರಂತೆ, ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಜಸಂಇ 114 ಎಸ್‌ಇಎಸ್ 2023 (ಇ),</u>
<u>ಬೆಂಗಳೂರು, ದಿನಾಂಕ: 04/03/2026</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಜಲಸಂಪನ್ಮೂಲ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ಹುದ್ದೆಗಳ ನೇರ ನೇಮಕಾತಿಯಲ್ಲಿ ಸಿವಿಲ್ ಮತ್ತು ಮೆಕ್ಯಾನಿಕಲ್ ವೃಂದದವರಿಗೆ 9:1 ರ ಅನುಪಾತವನ್ನು ನಿಗಧಿಪಡಿಸಿ ಕಾರ್ಯಕಾರಿ ಆದೇಶವನ್ನು ಹೊರಡಿಸಲಾಗಿದೆ.

(1) ಈ ಕಾರ್ಯಕಾರಿ ಆದೇಶದ ಮೂಲಕ ನಿಗಧಿಪಡಿಸಿದ ಅನುಪಾತವು ಸದರಿ ಕಾರ್ಯಕಾರಿ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಆರು ತಿಂಗಳ ಕಾಲ ಮಾತ್ರ ಜಾರಿಯಲ್ಲಿರುತ್ತದೆ.

(2) ಆರು ತಿಂಗಳ ಒಳಗಾಗಿ ಈ ಅನುಪಾತವನ್ನು ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಅಳವಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ಹರ್ಷ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸೇವೆಗಳು-ಎ)

PR-66

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಲಸಂಪನ್ಮೂಲ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ರ ಮೆಕ್ಯಾನಿಕಲ್ ವೃಂದದವರಿಗೆ ವಿದ್ಯಾರ್ಹತೆ ಹಾಗೂ ಪ್ರತ್ಯೇಕ ಪಠ್ಯಕ್ರಮವನ್ನು ನಿಗಧಿಪಡಿಸುವ ಕುರಿತು - ಕಾರ್ಯಕಾರಿ ಆದೇಶ.

ಓದಲಾಗಿದೆ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 293 ಸೇಸಕಿ 2005, ದಿನಾಂಕ:03.12.2014
2. ಸರ್ಕಾರದ ಆದೇಶ ಸಂಖ್ಯೆ: ಜಸಂಇ 208 ಸೇಎಸು 2019, ದಿನಾಂಕ:20.03.2023

****

ಪ್ರಸ್ತಾವನೆ:

1. ಮೇಲೆ (1)ರಲ್ಲಿ ಓದಲಾದ ದಿನಾಂಕ: 03-12-2014 ರ ಸರ್ಕಾರದ ಅಧಿಸೂಚನೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರಕಟಿಸಲಾಗಿದೆ. ಇದು ದಿನಾಂಕ: 11-12-2014 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿದೆ. ಅದರಂತೆ, ಜಲಸಂಪನ್ಮೂಲ ಇಲಾಖೆಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ವೃಂದದಲ್ಲಿನ ಹುದ್ದೆಗಳನ್ನು ನೇರ ನೇಮಕಾತಿ / ಮುಂಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

2. ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸೂಚಿ-I ರ ಕ್ರಮ ಸಂಖ್ಯೆ:5 ರಲ್ಲಿ ನಮೂದಿಸಲಾಗಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ಗಳ ನೇಮಕಾತಿಗೆ ಸಂಬಂಧಿಸಿದಂತೆ ಅನುಸೂಚಿಯ ಅಂಕಣ (6) ರಲ್ಲಿ ವಿದ್ಯಾರ್ಹತೆಯನ್ನು Must be holder of a degree in civil or Mechanical engineering or Possess equivalent qualification from recognized university/Institution ಎಂದು ನಿಗಧಿಪಡಿಸಲಾಗಿದ್ದು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1)(ಸಿವಿಲ್) & (ಮೆಕ್ಯಾನಿಕಲ್) ಹುದ್ದೆಗಳ ನೇರ ನೇಮಕಾತಿಗೆ ಪ್ರತ್ಯೇಕವಾಗಿ ವಿದ್ಯಾರ್ಹತೆಯನ್ನು ನಿಗಧಿಪಡಿಸಿರುವುದಿಲ್ಲವಾದ್ದರಿಂದ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವಲ್ಲಿ ತಾಂತ್ರಿಕ ತೊಂದರೆಗಳುಂಟಾಗಲಿದ್ದು, ಈ ಹುದ್ದೆಗಳ ನೇರ ನೇಮಕಾತಿ ಸಂದರ್ಭದಲ್ಲಿ ಸಿವಿಲ್ ಮತ್ತು ಮೆಕ್ಯಾನಿಕಲ್ ಇಂಜಿನಿಯರ್‌ಗಳಿಗೆ ಪ್ರತ್ಯೇಕವಾಗಿ ವಿದ್ಯಾರ್ಹತೆಯನ್ನು ನಿಗಧಿಪಡಿಸುವುದು ಹಾಗೂ ಪ್ರತ್ಯೇಕ ಪಠ್ಯಕ್ರಮವನ್ನು ನಿಗಧಿಪಡಿಸುವುದು ಅವಶ್ಯವಿರುತ್ತದೆ.

3. ಅದೇ ರೀತಿ, ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸೂಚಿ-II ರ SCHEME OF EXAMINATION ಗೆ ಸಂಬಂಧಿಸಿದಂತೆ Karnataka Water Resource Services (Recruitment of Assistant Executive Engineers Division-I by Competitive examination) Scheme ನಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1)(ಸಿವಿಲ್) ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಮಾತ್ರ ನೇಮಕಾತಿ ವಿಧಾನ ಹಾಗೂ ಪಠ್ಯ ಕ್ರಮಗಳನ್ನು ತಿಳಿಸಲಾಗಿದ್ದು, ಮೆಕ್ಯಾನಿಕಲ್ ಇಂಜಿನಿಯರ್‌ಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ನೇಮಕಾತಿ ವಿಧಾನ ಹಾಗೂ ಪಠ್ಯ ಕ್ರಮಗಳನ್ನು ತಿಳಿಸಿರುವುದಿಲ್ಲ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) (ಸಿವಿಲ್) & (ಮೆಕ್ಯಾನಿಕಲ್) ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ Scheduled-2 ರಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ವಿಧಾನವನ್ನು ಬಹು ಆಯ್ಕೆ ಮಾದರಿಯೇ / ವಿವರಣಾತ್ಮಕ ಮಾದರಿಯೇ ಎಂಬುದರ ಬಗ್ಗೆ ಸ್ಪಷ್ಟಪಡಿಸಿರುವುದಿಲ್ಲ. ಈ ನ್ಯೂನ್ಯತೆಗಳನ್ನು ಸರಿಪಡಿಸದೇ ಇದ್ದಲ್ಲಿ, ನೇಮಕಾತಿ ಸಂದರ್ಭದಲ್ಲಿ ಕಾನೂನಾತ್ಮಕ ಸಮಸ್ಯೆಗಳು ಎದುರಾಗುವ ಸಾಧ್ಯತೆಗಳಿದ್ದು, ನೇಮಕಾತಿ ಪ್ರಕ್ರಿಯೆಗೆ ದೀರ್ಘಕಾಲೀನವಾಗಿ ತಡೆಯಾಗುವ ಸಂಭವವಿರುತ್ತದೆ.

4. ಆದ್ದರಿಂದ, ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸೂಚಿ-I ರ ಕ್ರಮ ಸಂಖ್ಯೆ:5 ರಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1)(ಸಿವಿಲ್) & (ಮೆಕ್ಯಾನಿಕಲ್) ಹುದ್ದೆಗಳ ನೇರ ನೇಮಕಾತಿಗೆ ಪ್ರತ್ಯೇಕವಾಗಿ ವಿದ್ಯಾರ್ಹತೆಯನ್ನು ನಿಗಧಿಪಡಿಸುವ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳ ಅನುಸೂಚಿ-II ರ SCHEME OF EXAMINATION ಗೆ ಸಂಬಂಧಿಸಿದಂತೆ Karnataka Water Resource Services (Recruitment of Assistant Executive Engineers Division-I by Competitive examination) Scheme ನಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) (ಸಿವಿಲ್) & (ಮೆಕ್ಯಾನಿಕಲ್) ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಪ್ರತ್ಯೇಕ ನೇಮಕಾತಿ ವಿಧಾನ ಮತ್ತು ಪಠ್ಯ ಕ್ರಮಗಳನ್ನು ಅಳವಡಿಸುವ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ವಿಧಾನದಲ್ಲಿ ಸಾಮಾನ್ಯ ಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಒಂದನೇ ಪತ್ರಿಕೆಯನ್ನು ಬಹು ಆಯ್ಕೆ ಮಾದರಿಯಲ್ಲಿ ಹಾಗೂ ಎರಡನೇ ಪತ್ರಿಕೆಯನ್ನು ವಿವರಣಾತ್ಮಕ ಮಾದರಿಯಲ್ಲಿ ನಿಗಧಿಪಡಿಸಿ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ಹೊರಡಿಸುವುದು ಅವಶ್ಯವಿರುತ್ತದೆ.

5. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 97 ಎಸ್ಆರ್‌ಡಿ 2004, ದಿನಾಂಕ: 08-04-2004 ರಲ್ಲಿ ನಿಗಧಿಪಡಿಸಿರುವ ಎಲ್ಲಾ ಕಾರ್ಯ-ವಿಧಾನಗಳನ್ನು ಅನುಸರಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ಬಹಳಷ್ಟು ಕಾಲಾವಕಾಶ ಹಿಡಿಯಲಿರುವುದರಿಂದ ಹಾಗೂ ಜಲ ಸಂಪನ್ಮೂಲ ಇಲಾಖೆಯು 2021 ರಿಂದೀಚೆಗೆ ಲೋಕೋಪಯೋಗಿ ಇಲಾಖೆಯಿಂದ ಪ್ರತ್ಯೇಕಗೊಂಡು ಸ್ವತಂತ್ರ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ಜಲ ಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ನೇರ ನೇಮಕಾತಿಯಡಿ ಮಂಜೂರಾದ ಸುಮಾರು 240 ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ಹುದ್ದೆಗಳನ್ನು ಈವರೆವಿಗೂ ಭರ್ತಿ ಮಾಡದೇ ಖಾಲಿ ಉಳಿದಿದ್ದು, ಇಲಾಖೆಯ ವ್ಯಾಪ್ತಿಯಲ್ಲಿನ ಯೋಜನೆಗಳು / ಕಾಮಗಾರಿಗಳನ್ನು ನಿಗಧಿತ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದೇ ಯೋಜನಾ ವೆಚ್ಚವು ಕಾಲಕಾಲಕ್ಕೆ ಹೆಚ್ಚಾಗಿ ಸರ್ಕಾರಕ್ಕೆ ಹೆಚ್ಚಿನ ಹೊರೆಯಾಗಲಿರುವುದರಿಂದ ಈ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡುವ ನಿಟ್ಟಿನಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಸುಗಮಗೊಳಿಸುವ ಸಲುವಾಗಿ ಪ್ರಸ್ತಾಪಿತ ಅಂಶಗಳಿಗೆ ಸಂಬಂಧಿಸಿದಂತೆ ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವುದನ್ನು ಕಾಯ್ದಿರಿಸಿ, ಸದರಿ ಹುದ್ದೆಗಳಿಗೆ ನೇಮಕಾತಿ ವಿಧಾನ ಹಾಗೂ ಪಠ್ಯಕ್ರಮವನ್ನು ನಿಗಧಿಪಡಿಸಲು ಕಾರ್ಯಕಾರಿ ಆದೇಶ ಹೊರಡಿಸಲು ಸರ್ಕಾರವು ನಿರ್ಧರಿಸಿದೆ.

6. ಅದರಂತೆ ಈ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಜಸಂಇ 114 ಎಸ್‌ಇಎಸ್ 2023 (ಇ),</u>
<u>ಬೆಂಗಳೂರು, ದಿನಾಂಕ: 04/03/2026</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರದ ಅಧಿಸೂಚನೆ ಸಂಖ್ಯೆ:ಜಸಂಇ 293 ಸೇಸಕಿ 2005, ದಿನಾಂಕ:03-12-2014 ರನ್ವಯ ಜಾರಿಗೆ ಬಂದಿರುವ ಕರ್ನಾಟಕ ಜಲಸಂಪನ್ಮೂಲ ಸೇವೆಗಳು (ನೇಮಕಾತಿ) ನಿಯಮಗಳು, 2014 ರ ಅನುಸೂಚಿ-I ರ ಕ್ರಮ ಸಂಖ್ಯೆ:5 ರಲ್ಲಿ ನಮೂದಿಸಲಾಗಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1) ಗಳ ನೇಮಕಾತಿಗೆ ಸಂಬಂಧಿಸಿದಂತೆ, ಅನುಸೂಚಿಯ ಅಂಕಣ (6) ರಲ್ಲಿ ವಿದ್ಯಾರ್ಹತೆಯನ್ನು ಹಾಗೂ ಅನುಸೂಚಿ-II, SCHEME OF EXAMINATION ಸಂಬಂಧಿಸಿದಂತೆ Karnataka Water Resource Services (Recruitment of Assistant Executive Engineers Division-I by Competitive examination) Scheme ನಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1)(ಸಿವಿಲ್) & (ಮೆಕ್ಯಾನಿಕಲ್) ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ನೇಮಕಾತಿ ವಿಧಾನ, ಪಠ್ಯ

ಕ್ರಮಗಳನ್ನು ಅಳವಡಿಸುವ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ವಿಧಾನವನ್ನು ಕೆಳಕಂಡಂತೆ ನಿಗಧಿಪಡಿಸಿ ಆದೇಶಿಸಿದೆ.

SCHEDULE-1

Assistant Executive Engineer (Division-1)

Sl. No. in Schedule-I of C&R Rules	Category of Posts and Scale of pay	Minimum Qualification
(1)	(2)	(6)
(1)	**Assistant Executive Engineer (Division-1)** **(83700-155200)**	**Direct Recruitment:-** **1.** Assistant Executive Engineer (Division-1) (Civil) - Must be holder of a degree in civil engineering or Possess equivalent qualification from recognized university/Institution. **2.** Assistant Executive Engineer (Division-1) (Mechanical) - Must be holder of a degree in Mechanical engineering or Possess equivalent qualification from recognized university/Institution.

SCHEDULE-II

SCHEME OF EXAMINATION

5. **Age and academic qualification of candidates** - (2) Candidates must be holder of a Degree in Civil / Mechanical Engineering granted by a University established by Law in India and from an Institute approved by the AICTE or holder of a Diploma Certificate from the institution of Engineers (India) that he has passed Parts A & B of the Associate Membership Examination of the Institution of Engineers (India).

7. **Examination** – (1) The competitive examination shall consist of, -

(i) a written examination in Kannada, English, optional subjects and Objective Type in General Knowledge specified in the Annexure: and

ANNEXURE for CIVIL
(see clause 7(1))

As specified in Schedule-II of Scheme of Examination.

ANNEXURE for MECHANICAL
(see clause 7(1))

Written Examination: (1) All question papers, except Kannada language paper, must be answered in English in their own hand.

(1) **English** - Maximum marks-100. Duration of the paper 1 ½ hours

(2) **Kannada -** Maximum marks-100. Duration of the paper 1 ½ hours

Note-1.- The marks obtained in compulsory papers i.e., in English and in Kannada shall be of qualifying nature. For qualifying in these papers, a minimum of 30% in each paper and 35% aggregate is prescribed. The marks obtained in these two papers shall not be considered for determining the merit of selection. Candidates who do not secure the prescribed marks in the qualification papers, namely, Kannada and English shall not be eligible for personality test and selection.

(3) **General Knowledge** - Maximum marks -100. Duration of the paper 1 ½ hours

(4) **Optional Subjects** - A candidate may select any two of the subjects specified in Part-A and any two of the subjects specified in Part B :

(2) Maximum marks for each subject 100. Duration of each of the papers in 3 hours.

(3) The Standard and Syllabus of the Examination shall be as fixed in the B.E. degree or AMIE Examination

PART-A	**PART-B**
(i) Fluid Mechanics	(i) Turbo Machines
(ii) Mechanics of materials/Engineering Mechanics	(ii) Mechatronics
(iii) Energy, Environment and Power Plant	(iii) Theory of Elasticity
	(iv) Thermodynamics and Heat transfer
	(v) Fluid Power Engineering

OPTIONAL SUBJECTS-PART A

Fluid Mechanics:-

Basic Concepts, types and Properties of Fluids, Manometry, Fluid Statics, Buoyancy, Equations of Motion, Bernoulli's equation and applications, Viscous flow of incompressible fluids, Laminar and Turbulent flows, Flow through pipes and head losses in pipes, concepts of continuum, shear stress as applied to fluids, Newton's law, surface tension, Bulk modulus, compressibility, vapour pressure, capillarity, international standard atmosphere, Fluid dynamics.

Mechanics of materials/ Engineering Mechanics: -

Stresses and Strains: Introduction, Properties of materials, Stress, Strain and Hooke's law, Stress strain diagram for brittle and ductile materials, True stress and strain, Calculation of stresses in straight, Stepped and tapered sections, Composite sections, Stresses due to temperature change, Shear stress and strain, Lateral strain and Poisson's ratio, Elastic constants and relations between them.

Analysis of Stress and Strain: Introduction to three dimensional state of stress, Stresses on inclined planes, Principal stresses and maximum shear stress, Principal angles, Shear stresses on principal planes, Maximum shear stress, Mohr circle for plane stress conditions. Cylinders: Thin cylinder: Hoop's stress, maximum shear stress, circumferential and longitudinal strains, Thick cylinders: Lames equations.

Shear Force and Bending Moment: Type of beams, Loads and reactions, Relationship between loads, shear forces and bending moments, Shear force and bending moments of cantilever beams, Pin support and roller supported beams subjected to concentrated loads, uniformly distributed constant/varying loads.

Stress in Beams: Bending and shear stress distribution in rectangular, I and T section beams.

Theories of Failure: Maximum Principal stress theory, Maximum shear stress theory.

Torsion: Circular solid and hallow shafts, Torsional moment of resistance, Power transmission of straight and stepped shafts, Twist in shaft sections, Thin tubular sections, Thin walled sections.

Columns: Buckling and stability, Critical load, Columns with pinned ends, Columns with other support conditions, Effective length of columns, Secant formula for columns.

Strain Energy: Strain energy due to axial, shear, bending, torsion and impact load. Castigliano's theorem I and II and their applications.

Energy, Environment and Power Plants:

Energy: Solar Energy: Introduction, Solar radiation measurements, Solar collectors, Solar energy Storage, Solar energy applications.

Biomass Energy: bio mass conversion, bio-gas generation, factors affecting the gas generation, classification of bio-gas plants, advantages and disadvantages Constructional details of KVIC, Deenbhandu and Janata model, community bio gas plants, factors affecting bio gas generation, Thermal gasification of biomass.

Geothermal Energy: Forms of geothermal energy, Dry steam, wet steam, hot dry rock and magmatic chamber systems, Geothermal Energy Conversion, Principle of working, types of geothermal station with schematic diagram, geothermal plants in the world, problems associated with geothermal conversion, scope of geothermal energy.

Tidal Energy: Fundamental characteristics of tidal power, harnessing tidal energy, Limitations.

Site selection, Single basin and double basin systems, Advantages and disadvantages of tidal energy, Ocean Thermal Energy Conversion: Principle of working, Rankine cycle, OTEC power stations in the world, problems associated with OTEC.

Wind energy: Introduction Principles of energy conversion, wind data and energy estimation, site selection, basic components of the system, classification, advantages and disadvantages of wind energy conversion system. Design consideration of horizontal axis machines, vertical axis machines, performance of wind machines using basic power expression, wind energy storage, application of wind energy system.

Hydrogen Energy: Properties of Hydrogen with respected to its utilization as a renewable form of energy, sources of hydrogen, production of hydrogen, electrolysis of water, thermal decomposition of water, thermo chemical production bio-chemical production.

Environment: Air pollution, Water pollution, Soil pollution, Marine pollution, Noise pollution, Thermal pollution and Nuclear hazards, - Sources, causes, Classification, Global implications, Controlling measures, Solid waste Management, Disaster management Role of an individual in prevention of pollution, Pollution case studies.

Environment Protection Act, Air (Prevention and Control of Pollution) Act, Water (Prevention and control of Pollution) Act, Wildlife Protection Act, Forest Conservation Act, Issues involved in enforcement of environmental legislation.

Power Plants: Hydroelectric Power plants: Energy lines- HGL and TEL, hydro meteoric survey, selection of site for a dam, head race, tail race, gross head, net head, Hydrographs and flow duration curves, Storage and pondage, Assessment of Available Power for a proposed Hydel Power station, General layout of hydel power plants- components such as Penstock, surge tanks, spill way and draft tube and their applications, pumped storage plants, Detailed classification of hydroelectric plants, water hammer. Advantages & disadvantages of water power, Types of Hydropower Power Plant. Connected Load, Maximum Demand, Demand Factor, Load curve, load factor, Plant-use Factor, capacity factor, diversity factor, peak load.

Thermal power Plants: Coal and ash handling, Generation of steam using forced circulation, high and supercritical pressures, LaMount, Benson, Velox, Loeffer, Schmidt steam generators, Cooling towers and Ponds, Accessories such as Superheaters, De-superheater, Economizers, Air preheaters.

OPTIONAL SUBJECTS-PART B

Turbo Machines :-

Reciprocating and Rotary pumps, Vertical Turbine Pumps: Construction and working principle classification vector diagram, Work done, efficiencies, minimum starting speed specific speed performance characteristics, multistage pumps.

Centrifugal pumps: Construction and working principle classification vector diagram, Work done, efficiencies, minimum starting speed specific speed performance characteristics, multistage pumps.

Reciprocating Pumps: Construction and working principle, classification, definition of slip, co-efficient of discharge, indicator diagram effect of friction acceleration and air vessel, maximum speed of crank.

Pelton wheel, Kaplan and Francis Turbines, velocity diagrams, Impulse and Reaction principles, Steam and Gas Turbines, Theory of Jet Propulsion - Pulse jet and Ram Jet Engines, Reciprocating and Rotary Compressors - Theory and Applications. Centrifugal Compressors: Stage velocity triangles, slip factor, power input factor, Stage work, Pressure developed, stage efficiency and surging and problems.

Mechatronics:-

Definition of Mechatronics - Scope of mechatronics, Basic system models - Engineering systems Rotation / Translational system, Electromechanical and Hydro mechanical systems. Input/Output systems. Sensors and transducers, Piezoelectric accelerometer, Hall effect sensor, Optical Encoder, Resolver, Inductosyn, Pneumatic, Hydraulic, Mechanical and Electrical actuation systems, stepper motor, Control Systems- Mathematical modelling of Physical systems, control signals, controllability and observability.

Microprocessor & Microcontrollers: Introduction, Microprocessor systems, Basic elements of control systems, Microcontrollers, Difference between Microprocessor and Microcontrollers. Architecture, programming, Computer interfacing, Input/Output systems.

Programmable Logic Controller: Introduction to PLCs, Basic structure of PLC, Principle of operation, input and output processing, PLC programming language, ladder diagram, ladder diagrams circuits, timer counters, internal relays, master control, jump control, shift registers, data handling, and manipulations, analogue input and output, selection of PLC for application.

Data acquisition systems (DAQS), data loggers, Supervisory control and data acquisition (SCADA), Communication methods.

Theory of Elasticity:

Introduction to Mathematical theory of elasticity, definition of continuum, Differential equations of equilibrium, boundary conditions, compatibility equations, Airy's stress function, problems, Stress polynomials, St. Venant's principle.

Two-dimensional problems in rectangular coordinates, bending of a cantilever beam subjected to end load, effect of shear deformation in beams, Simply supported beam subjected to UDL, stress concentration, stress distribution in an infinite plate with a circular hole subjected to uniaxial and biaxial loads.

Two-dimensional problems in polar coordinates, strain-displacement relations, equations of equilibrium, compatibility equation, stress function.

Stress distribution symmetrical about an axis, Rotating discs, Lame's problem-thick cylinder.

Effect of circular holes an stress distribution in plates subjected to tension, compression and shear. Stress concentration factor, Bending of a curved bar by a force at the end.

Torsion: Inverse and Semi-inverse methods, stress function, torsion of circular, elliptical sections and triangular bars, Prandtl's membrane analogy, Torsion of thin-walled thin tubes, Torsion of thin walled multiple cell closed sections.

Thermal stress: Thermo elastic stress strain relations, equations of equilibrium, thermal stresses in thin circular discs and in long circular cylinders.

Thermodynamics and Heat transfer:

Thermodynamic systems and processes; properties of pure substance, Zeroth, First and Second Laws of Thermodynamics; Entropy, Irreversibility and availability; analysis of thermodynamic cycles related to energy conversion: Rankine, Otto, Diesel and Dual Cycles; ideal and real gases, compressibility factor, Gas mixtures. Modes of heat transfer, Steady and unsteady heat conduction, Thermal resistance, Fins, Free and forced convection, Correlations for convective heat transfer, Radiative heat transfer - Radiation heat transfer co-efficient, boiling and condensation, Heat exchanger performance analysis

IC Engines, Refrigeration and Air conditioning: SI and CI Engines, Engine Systems and Components, Performance characteristics and testing of IC Engines; Fuels; Emissions and Emission

Control. Vapour compression refrigeration, Refrigerants and Working cycles, Compressors, Condensers, Evaporators and Expansion devices, Other types of refrigeration systems like Vapour Absorption, Vapour jet, thermo electric and Vortex tube refrigeration. Psychometric properties and processes, Comfort chart, Comfort and industrial air conditioning, Load calculations and Heat pumps.

Reciprocating Compressors: Operation of a single stage reciprocating compressors. Work input through p-v diagram and steady state steady flow analysis. Effect of Clearance and Volumetric efficiency. Adiabatic, Isothermal and Mechanical efficiencies. Multi-stage compressor, saving in work, Optimum intermediate pressure, Inter-cooling, Minimum work for compression. Steam nozzles: Flow of steam through nozzles, Shape of nozzles, effect of friction, Critical pressure ratio, Supersaturated flow.

Fluid Power Engineering:

Fluid power system: components, advantages and applications. Transmission of power at static and dynamic states. Pascal's law and its applications. Fluids for hydraulic system: types, properties and selection. Additives, effect of temperature and pressure on hydraulic fluid. Seals, sealing materials, compatibility of seal with fluids. Types of pipes, hoses, and quick acting couplings. Pressure drop in hoses/pipes. Fluid conditioning through filters, strainers; sources of contamination and contamination control; heat exchangers

Pumps and actuators:

Pumps: Classification of pumps, Pumping theory of positive displacement pumps, construction and working of Gear pumps, Vane pumps, Piston pumps, fixed and variable displacement pumps, Pump performance characteristics, pump selection factors.

Accumulators: Types, and applications of accumulators. Types of Intensifiers, Pressure switches/sensor, Temperature switches/sensor, Level sensor

Actuators: Classification-cylinder and hydraulic motors, Hydraulic cylinders, single and Double acting cylinder, mounting arrangements, cushioning, special types of cylinders.

Construction and working of rotary actuators such as gear, vane, piston motors, and Hydraulic Motor. Theoretical torque, power, flow rate, and hydraulic motor performance.

Components and hydraulic circuit design Components: Classification of control valves-

Directional Control Valves-symbolic representation, constructional features of poppet, sliding spool, rotary type valves solenoid and pilot operated DCV, shuttle valve, and check valves. Pressure control valves types, direct operated types and pilot operated types.

Flow Control Valves compensated and non-compensated FCV, needle valve, temperature compensated, pressure compensated, pressure and temperature compensated FCV, symbolic representation.

Hydraulic Circuit Design: Control of single and Double -acting hydraulic cylinder, regenerative circuit, pump unloading circuit, counter balance valve application, hydraulic cylinder sequencing circuits, hydraulic circuit for force multiplication; speed control of hydraulic cylinder- metering in, metering out and bleed off circuits. Pilot pressure operated circuits.

Pneumatic power systems

Introduction to Pneumatic systems: Pneumatic power system, advantages, limitations, applications, Choice of working medium. Characteristics of compressed air and air compressors. Structure of pneumatic control System, fluid conditioners-dryers and FRL unit.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

Pneumatic Actuators: Linear cylinder- types of cylinders, working, end position cushioning, seals, mounting arrangements and applications. Rotary cylinders- types, construction and application, symbols.

Pneumatic Control Valves: DCV such as poppet, spool, suspended seat type slide valve, pressure control valves, flow control valves, types and construction, use of memory valve, Quick exhaust valve, time delay valve, shuttle valve, twin pressure valve, symbols.

Pneumatic control circuits

Simple Pneumatic Control: Direct and indirect actuation pneumatic cylinders, speed control of cylinders-supply air throttling and exhaust air throttling.

Signal Processing Elements: Use of Logic gates OR and gates in pneumatic applications. Practical examples involving the use of logic gates

Multi- Cylinder Application: Coordinated and sequential motion control, motion and control diagrams. Signal elimination methods, Cascading method- principle, Practical application examples (up to two cylinders) using cascading method (using reversing valves).

Electro- Pneumatic Control: Principles signal input and output, pilot assisted solenoid control of directional control valves, use of relay and contactors. Control circuitry for simple signal cylinder application.

ಇನ್ನುಳಿದಂತೆ ಜಲಸಂಪನ್ಮೂಲ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳ ಅಧಿಸೂಚನೆ ಸಂಖ್ಯೆ: ಜಸಂಇ 293 ಸೇಸಕಿ 2005, ದಿನಾಂಕ:03.12.2014 ರಲ್ಲಿ ಇನ್ಯಾವುದೇ ಬದಲಾವಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ಹರ್ಷ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸೇವೆಗಳು-ಎ)

PR-67

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH